ಸೃಜನಿ

SRUJANI: Indian Journal of Innovative Research and Development (SIJIRD)
Volume-5 Issue 1, March-April 2026, Pp. 34-38
Bi-Monthly, Peer-Reviewed, Open Access, Indexed Journal

I S S N: 2583-3510
SIRDF JOURNALS
editor@srujani.in
www.srujani.in

# ಗೊರೂರು ರಾಮಸ್ವಾಮಿ ಅಯ್ಯಂಗಾರ್ ಅವರ ಬಾಲ್ಯದ ಅನುಭವಗಳು – ಒಂದು ಕಿರುನೋಟ

**ಡಾ. ಅಮೃತಾಕ್ಷಿ ಜಿ**
ಸಹ ಪ್ರಾಧ್ಯಾಪಕರು, ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಟಿ.ದಾಸರಹಳ್ಳಿ, ಬೆಂಗಳೂರು

***Abstract:***
*ಈ ಸಂಶೋಧನಾ ಲೇಖನವು ಕನ್ನಡದ ಪ್ರಸಿದ್ಧ ಸಾಹಿತಿ ಗೊರೂರು ರಾಮಸ್ವಾಮಿ ಅಯ್ಯಂಗಾರ್ ಅವರ ಬಾಲ್ಯದ ಅನುಭವಗಳನ್ನು ಅಧ್ಯಯನ ಮಾಡುತ್ತದೆ. ಅವರ ಬಾಲ್ಯದಲ್ಲಿ ಕಂಡ ಗ್ರಾಮೀಣ ಪರಿಸರ, ಕುಟುಂಬ ಜೀವನ, ಸಾಮಾಜಿಕ ಸಂಬಂಧಗಳು ಮತ್ತು ಸಾಂಸ್ಕೃತಿಕ ವಾತಾವರಣವು ಅವರ ವ್ಯಕ್ತಿತ್ವ ರೂಪುಗೊಳ್ಳುವಲ್ಲಿ ಮಹತ್ವದ ಪಾತ್ರ ವಹಿಸಿವೆ. ಬಾಲ್ಯದ ನೆನಪುಗಳು, ಅನುಭವಗಳು ಮತ್ತು ಸುತ್ತಮುತ್ತಲಿನ ಜನಜೀವನವು ಅವರ ಸಾಹಿತ್ಯಿಕ ಚಿಂತನೆ ಹಾಗೂ ಬರವಣಿಗೆಯ ಮೇಲೆ ಬೀರಿದ ಪ್ರಭಾವವನ್ನು ಇಲ್ಲಿ ವಿಶ್ಲೇಷಿಸಲಾಗಿದೆ. ಅವರ ಕೃತಿಗಳಲ್ಲಿ ವ್ಯಕ್ತವಾಗುವ ಹಾಸ್ಯ, ಮಾನವೀಯತೆ, ಸರಳತೆ ಮತ್ತು ಗ್ರಾಮೀಣ ಬದುಕಿನ ಚಿತ್ರಣಗಳಿಗೆ ಬಾಲ್ಯದ ಅನುಭವಗಳು ಹೇಗೆ ಪ್ರೇರಣೆಯಾಗಿವೆ ಎಂಬುದನ್ನು ಗುರುತಿಸಲಾಗಿದೆ. ಈ ಅಧ್ಯಯನವು ಗೊರೂರು ರಾಮಸ್ವಾಮಿ ಅಯ್ಯಂಗಾರ್ ಅವರ ಸಾಹಿತ್ಯಿಕ ವ್ಯಕ್ತಿತ್ವವನ್ನು ಅರ್ಥಮಾಡಿಕೊಳ್ಳಲು ಬಾಲ್ಯದ ಅನುಭವಗಳ ಮಹತ್ವವನ್ನು ಸ್ಪಷ್ಟಪಡಿಸುತ್ತದೆ.*

***Keywords:*** *ಗೊರೂರು ರಾಮಸ್ವಾಮಿ ಅಯ್ಯಂಗಾರ್, ಬಾಲ್ಯದ ಅನುಭವಗಳು, ಗ್ರಾಮೀಣ ಜೀವನ, ಸಾಹಿತ್ಯಿಕ ವ್ಯಕ್ತಿತ್ವ, ಕನ್ನಡ ಸಾಹಿತ್ಯ.*

## ಪೀಠಿಕೆ

ಬಾಲ್ಯ ಎಂಬುದು ಪ್ರತಿಯೊಬ್ಬರ ಮನದಲ್ಲೂ ಅಚ್ಚಳಿಯದೆ ಉಳಿದಿರುವಂತಹ ವಿಷಯ. ಯಾರೊಬ್ಬರ ಬಾಲ್ಯವು ಅನುಭವಗಳ ಸಂತೆಯಾಗಿರುತ್ತದೆ. ಕಳೆದು ಹೋಗಿರುವ ಬಾಲ್ಯವನ್ನು ಮತ್ತೆ ಮತ್ತೆ ನೆನಪು ಮಾಡಿಕೊಂಡು ಮತ್ತೆ ಬರಬಾರದೇ ಎಂದು ನಾವೆಲ್ಲರೂ ಕೊರಗುತ್ತಿರುತ್ತೇವೆ. ನಮ್ಮಗಳ ಬಾಲ್ಯದ ತುಂಟಾಟಗಳನ್ನು ಇಂದಿನ ಮಕ್ಕಳ ಜೊತೆ ನೋಡಿ ನೆನಪು ಮಾಡಿಕೊಂಡು ಸಂತೋಷಪಡುತ್ತಿರುತ್ತೇವೆ. ಅದೇ ರೀತಿ ಗೊರೂರು ರಾಮಸ್ವಾಮಿ ಅಯ್ಯಂಗಾರ್ ಅವರ ಬಾಲ್ಯದ ಅನುಭವಗಳು ಸಹ ಎಲ್ಲರ ಬಾಲ್ಯದಂತೆಯೇ ಸಿಹಿಯಾಗಿ ಸವಿಯಾಗಿ ಇರುವಂತದ್ದು. ಆದರೆ ಅವರ ಬಾಲ್ಯದ ಅನುಭವಗಳ ಬರವಣಿಗೆಯು ಓದುಗನಿಗೆ ಕೇವಲ ನೆನಪುಗಳಾಗಿ ಕಾಡುವುದಿಲ್ಲ ಅದರ ಜೊತೆಗೆ ಕಳೆದ ಶತಮಾನದ ಆರಂಭ ವರ್ಷಗಳಲ್ಲಿ ಹಳ್ಳಿಯ ಸ್ಥಿತಿಗತಿಗಳನ್ನು ನಮ್ಮ ಮುಂದೆ ಬಿಚ್ಚಿಡುತ್ತವೆ. ಅಂದಿನ ಸಾಮಾಜಿಕ, ಶೈಕ್ಷಣಿಕ, ಆರ್ಥಿಕ, ಸಾಂಸ್ಕೃತಿಕ ಚಿತ್ರಗಳು ಮತ್ತು ಈಗ ಕಾಣ ಸಿಗದ ಮತ್ತು ತ್ವರಿತವಾಗಿ ಬದಲಾಗುತ್ತಿರುವ ಹಳ್ಳಿಯ ಸೊಬಗನ್ನು ಕಣ್ಣಿಗೆ ಕಟ್ಟುವಂತೆ ಚಿತ್ರಿಸುವುದರಲ್ಲಿ ಗೊರೂರು ಯಶಸ್ವಿಯಾಗಿದ್ದಾರೆ.

***Please cite this article as:*** ಅಮೃತಾಕ್ಷಿ ಜಿ. (2026). ಗೊರೂರು ರಾಮಸ್ವಾಮಿ ಅಯ್ಯಂಗಾರ್ ಅವರ ಬಾಲ್ಯದ ಅನುಭವಗಳು – ಒಂದು ಕಿರುನೋಟ. *ಸೃಜನಿ: ಇಂಡಿಯನ್ ಜರ್ನಲ್ ಆಫ್ ಇನ್ನೋವೇಟಿವ್ ರೀಸರ್ಚ್ ಅಂಡ್ ಡೆವೆಲಪ್‌ಮೆಂಟ್*, 5(1), 34–38

ಗೊರೂರು ಗ್ರಾಮ ಮತ್ತು ಹೇಮಾವತಿ ನದಿ – ಇವೆರೆಡು ಸಹ ಗೊರೂರರ ಬರವಣಿಗೆಯಿಂದ ಚಿರಸ್ಥಾಯಿಯಾಗಿ ಉಳಿಯುವಂತೆ ಆಗಿವೆ. ಹೀಗೆ ಒಂದು ಊರಿನೊಡನೆ, ನದಿಯೊಡನೆ ಅಭಿನ್ನತೆ ಸಾಧಿಸಿದ ಲೇಖಕರು ತುಂಬಾ ವಿರಳವೇ ಸರಿ, ಗೊರೂರು ಸಾಹಿತ್ಯದಲ್ಲಿ ಪ್ರಾದೇಶಿಕತೆಗೆ ಪ್ರಾಮುಖ್ಯತೆ ಇದ್ದರೂ ಅವರು ಕೊಡುವ ಜೀವನ ಚಿತ್ರಣ ಪ್ರಾತ್ರಿನಿಧಿಕವೂ ಆಗಿದೆ. ನಾವು ಈಗ ನೋಡುತ್ತಿರುವ ಗೊರೂರು ಎಂಬ ಗ್ರಾಮ ಇಪ್ಪತ್ತನೇ ಶತಮಾನದ ಆರಂಭದ ದಿನಗಳಲ್ಲಿ ಹೇಗಿತ್ತು ಎಂಬುದರ ಸಜೀವ ಚಿತ್ರಣವನ್ನು ಗೊರೂರರ ಬರವಣಿಗೆಯಲ್ಲಿ ನಾವು ಕಾಣಬಹುದಾಗಿದೆ. ಅವರ ಬಾಲ್ಯದ ನೆನಪುಗಳಲ್ಲಿ ಗೊರೂರಿನ ಹೇಮಾವತಿ ನದಿಗೆ ಸೇತುವೆ ಇಲ್ಲದ ಕಾಲದಲ್ಲಿ ಮತ್ತು ಅಣೆಕಟ್ಟು ಕಟ್ಟುವ ಸಂದರ್ಭದ ನೆನಪುಗಳನ್ನು ಅವರ ಬಾಲ್ಯದ ಆತ್ಮಕಥೆಯಲ್ಲಿ ತೆರೆದಿಡುತ್ತಾರೆ. ಹಾಸನದಿಂದ ಗೊರೂರಿನ ಮಾರ್ಗವಾಗಿ ಮೈಸೂರಿಗೆ ಹೋಗಬೇಕಾದರೆ ಸೇತುವೆಯನ್ನು ದಾಟಿ ಹೋಗಬೇಕು ಆಗ ಜೋಡು ದೋಣಿಯ ಮೇಲೆ ಗಾಡಿಗಳನ್ನು ಹೊಳೆಯಲ್ಲಿ ಸಾಗಿಸುತ್ತಿದ್ದರು ಈ ಜೋಡು ದೋಣಿಗಳಿಗೆ ಜಂಜಾಲು ಎಂದು ಕರೆಯುತ್ತಾರೆ. ಆ ಕಾಲದಲ್ಲಿ ದಿವಾನರು ರಾಜರು ಬಂದರೆ ಆ ದೋಣಿಗೆ ಅಲಂಕಾರ ಮಾಡಿ ಅವರನ್ನು ದಾಟಿಸುತ್ತಿದ್ದರಂತೆ ಗೊರೂರರು ಮತ್ತು ಅವರ ಗೆಳೆಯರಿಗೆ ಸೋಮವಾರ ತುಂಬಾ ಸಂತೋಷದ ದಿನವಾಗಿರುತ್ತದೆ. ಏಕೆಂದರೆ ಕೊಡಗಿನಿಂದ ಕಿತ್ತಳೆ ತುಂಬಿದ ಗಾಡಿಗಳನ್ನು ಈ ನದಿಯಲ್ಲಿ ದಾಟಿಸಿ ಹಾಸನದ ಮಾರ್ಗವಾಗಿ ಬೆಂಗಳೂರಿಗೆ ಸಾಗಿಸುತ್ತಿದ್ದರು. ಒಂದು ರೂಪಾಯಿಗೆ ನೂರು ಹಣ್ಣುಗಳು ಸಿಗುತ್ತಿದ್ದವು. ಮಕ್ಕಳಿಗೆ ನಾಲ್ಕಾಣೆಗೆ ಇಪ್ಪತ್ತೈದು ಹಣ್ಣುಗಳನ್ನು ಕೊಡುತ್ತಿದ್ದರಂತೆ. ಗೊರೂರಿನ ಹೇಮಾವತಿ ನದಿಯ ಸೇತುವೆ ಕಟ್ಟಲು ಅರಕಲಗೂಡಿನ ಶ್ರೀ ಸೂರ್ಯನಾರಾಯಣ ಶೆಟ್ಟರೂ ಮತ್ತು ಕೊಡಗಿನ ಶ್ರೀಮತಿ ಸಾಕಮ್ಮನವರು ಸರ್ಕಾರಕ್ಕೆ ಸಾಲವನ್ನು ಕೊಟ್ಟಿದ್ದರಂತೆ. 1927 ರಲ್ಲಿ ಹೇಮಾವತಿಗೆ ಸೇತುವೆ ಆಗುವವರೆಗೂ ಇವರಿಗೆ ಕಿತ್ತಳೆ ಹಣ್ಣುಗಳ ಫಲಾಹಾರವು ತಪ್ಪದೆ ದೊರಕುತ್ತಿತ್ತು ಎನ್ನುತ್ತಾರೆ.

ಗೊರೂರರ ಬಾಲ್ಯದ ನೆನಪುಗಳಲ್ಲಿ ಹಬ್ಬದ ಸರಮಾಲಿಕೆಗಳೇ ವಿಶೇಷ. ಯುಗಾದಿ ಹಬ್ಬವು ನಿಜವಾದ ಸಂಭ್ರಮದ ಹಬ್ಬವಾಗಿರುತ್ತದೆ. ನಮ್ಮ ಬಾಲ್ಯದ ನೆನಪುಗಳು ಸಹ ಯುಗಾದಿಯ ಸಂಭ್ರಮವನ್ನು ನೆನಪಿಸುತ್ತವೆ. ಆದರೆ ಇಂದು ಜಾಗತೀಕರಣದ ಬರದಲ್ಲಿ ಹಬ್ಬಗಳಲ್ಲಿ ಸಂತಸ ಸಂಭ್ರಮವು ಮರೆಯಾಗುತ್ತಿವೆ. ಅವರ ಬಾಲ್ಯದಲ್ಲಿ ಯುಗಾದಿಯಂದು ಊರಿನ ಎಲ್ಲ ವಯೋಮಾನದವರೂ, ಎಲ್ಲ ಜಾತಿಯವರೂ ಸೇರಿ ಚೆಂಡಾಟವಾಡುತ್ತಿದ್ದು ಅದರಲ್ಲಿ ಊರಿನ ಯಾರೊಬ್ಬರೂ ತಪ್ಪಿಸಿಕೊಳ್ಳುವ ಹಾಗೆ ಇರಲಿಲ್ಲ. ಹಬ್ಬಕ್ಕೆ ಕೆಲವು ದಿನದ ಮುಂಚೆಯೇ ಚೆಂಡುಗಳನ್ನು ಹೊಲಿಯುವುದು ಕಂಡುಬರುತ್ತದೆ. ಚೆಂಡಾಟದಲ್ಲಿ ಮುಚ್ಚೆಂಡು, ರಾಮಚೆಂಡು, ಸಿಕ್ಕಚೆಂಡು, ಕುದುರೆ ಚೆಂಡು ಇವು ಮುಖ್ಯವಾದ ವಿಧಗಳಾಗಿರುತ್ತವೆ. ಇವು ನಮ್ಮ ಜನಪದೀಯ ಸಾಂಸ್ಕೃತಿಕ ಆಚರಣೆಯ ದ್ಯೋತಕಗಳು. ಇಂತಹ ಆಚರಣೆಗಳು ಊರಿನ ಜನರ ನಡುವಿನ ಬಾಂಧವ್ಯವನ್ನು ಬೆಸೆಯುವಲ್ಲಿ ಪ್ರಮುಖ ಪಾತ್ರವಹಿಸಿದ್ದವು. ಆದರೆ ಇಂದು ನವನಾಗರಿಕತೆ ಎಂಬ ಮೋಹಕ್ಕೆ ತುತ್ತಾಗಿ ಅಂತಹ ಹಬ್ಬದ ಆಟ ಪಾಠಗಳನ್ನು ಕ್ಷುಲ್ಲಕ ಎಂದು ಪರಿಗಣಿಸಿ ಅವುಗಳಲ್ಲಿ ಭಾಗವಹಿಸುವುದರಿಂದ ತಮ್ಮ ಘನತೆಗೆ ಕುಂದು ಎಂಬಂತೆ ಭಾವಿಸಿ ಅಂತಹ ಮೂಲ ಸಂಸ್ಕೃತಿಯಿಂದ ದೂರಾಗುತ್ತಿದ್ದಾರೆ ಮತ್ತು ಇಂದು ಊರೂರುಗಳಲ್ಲಿ ರಾತ್ರಿ ಇಡೀ ಆಟವನ್ನು ಆಡುವುದರ ಮೂಲಕ ದುಷ್ಪತನವನ್ನು ಪ್ರೋತ್ಸಾಹಿಸುವ ಸಾಂಸ್ಕೃತಿಕ ಹಾದಿಯನ್ನು ಹಿಡಿದಿದ್ದಾರೆ. ಬಾಲ್ಯದಲ್ಲಿ ಇವರು ಮುಸ್ಲಿಂ ಹಬ್ಬಗಳಾದ ಬಕ್ರೀದ್, ಮೊಹರಂ, ರಂಜಾನ್‌ಗಳಲ್ಲಿ ಆಸಕ್ತಿ ವಹಿಸುತ್ತಿದ್ದುದ್ದು ಕಾಣಬಹುದಾಗಿದೆ. ಇಡೀ ಊರ ಜನರೆಲ್ಲರೂ ಮತಾತೀತವಾಗಿ ಎಲ್ಲ

ಹಬ್ಬಗಳಲ್ಲೂ ಭಾಗವಹಿಸುತ್ತಿದ್ದರು. ಹಿಂದೂ ಮುಸಲ್ಮಾನ ಬಾಂಧವ್ಯ ಗೊರೂರರಲ್ಲಿ ಮಧುರವಾಗಿಯೇ ಇತ್ತು ಎಂಬ ಮಾತನ್ನು ಹೇಳುತ್ತಾರೆ. ಜಾತಿ–ಮತ–ಭೇದಗಳನ್ನು ಮೀರಿ ಎಲ್ಲರನ್ನೂ ಒಗ್ಗೂಡಿಸುವ ಕೆಲವು ಸೂತ್ರಗಳನ್ನು ಗೊರೂರರು ಗುರುತಿಸಿ ಅವುಗಳಿಗೆ ಒತ್ತು ಕೊಡುವುದರ ಮೂಲಕ ಸಾಮರಸ್ಯಯುತವಾದ ಒಂದು ಸಮಷ್ಟಿಯ ಚಿತ್ರವನ್ನು ಮೂಡಿಸುತ್ತಾರೆ.

ಅವರ ಲೆಕ್ಕಣಿ ಚಲನ ಛಾಯ ಬಿಂಬಗ್ರಾಹಿಯೊ ಆಗಿ, ಗ್ರಾಮಜೀವನದಲ್ಲಿ ಮಹತ್ವದ ಪಾತ್ರವಹಿಸುವ ಉತ್ಸವಗಳು, ಹಬ್ಬ ಹರಿದಿನಗಳು, ಜನಪದ ಕಲೆಗಳು, ಜನತೆಯಲ್ಲಿ ರೂಢಿಯಾಗಿರುವ ಆಚಾರ ವಿಚಾರ, ನಂಬಿಕೆ ನಡಾವಳಿಗಳು ಎಲ್ಲವನ್ನೂ ಯಥಾವತ್ತಾಗಿ, ಸಜೀವವಾಗಿ ಸೆರೆ ಹಿಡಿದಿವೆ. ಗ್ರಾಮೀಣ ಸಂಸ್ಕೃತಿಯ ವಿಶ್ವರೂಪವನ್ನೇ ಅಲ್ಲಿ ಕಾಣಬಹುದು. "ಗೊರೂರರ ಕೃತಿಗಳು ಬರು ಬರುತ ಹಳ್ಳಿಗಳ ಮಹಾಭಾರತಗಳೇ ಆಗುತ್ತಿವೆ" ಎಂಬ ವಿ.ಕೃ. ಗೋಕಾಕಕರ ಮಾತೊಂದು ಉಲ್ಲೇಖನೀಯವಾಗಿದೆ.

ಗೊರೂರರಿಗೆ ಬಾಲ್ಯದಿಂದಲೂ ಪ್ರಾಣಿಗಳ ಮೇಲೆ ತುಂಬಾ ಪ್ರೀತಿ ಮತ್ತು ಕರುಣೆ. ಅವುಗಳ ಬುದ್ಧಿವಂತಿಕೆಯ ಮೇಲೆ ಆಶ್ಚರ್ಯಪಡುತ್ತಿದ್ದರು. ಕುದುರೆಯ ತೀಕ್ಷ್ಣ ಬುದ್ಧಿ, ಎಮ್ಮೆಯ ಒಂದು ಗಾಂಭೀರ್ಯ, ನಿರ್ಲಕ್ಷ್ಯ ಸ್ವಭಾವ ಅನಾಸಕ್ತಿ ನನ್ನನ್ನು ಆಕರ್ಷಿಸಿದವು ಎನ್ನುತ್ತಾರೆ. ಆ ಕಾಲದಲ್ಲಿ ಗೋ ಸೇವಕರು ಹಸುವಿನ ಪ್ರಾಮುಖ್ಯ ಪ್ರಾಶಸ್ತ್ಯವನ್ನು ಕುರಿತು ಪ್ರಚಾರ ಚಳುವಳಿ ನಡೆಸಿದಾಗಲೆಲ್ಲ ಇವರು ಎಮ್ಮೆಯನ್ನು ಕುರಿತು ನಾಲ್ಕು ಮಾತಾಡಬಾರದೇ ಎಮ್ಮೆ ಎಂಥ ಉಪಯುಕ್ತ ಪ್ರಾಣಿ ಎಂದೆಣಿಸುತ್ತಿದ್ದರು. ಕುದುರೆ ಮತ್ತು ಎಮ್ಮೆಯನ್ನು ಕಂಡಾಗ ಯಾವುದೋ ಪೂರ್ವಜನ್ಮದ ಮಿತ್ರತ್ವ ಬಾಂಧವ್ಯವನ್ನು ಕಣ್ಣಿನಲ್ಲಿ ತೋರಿ, ನನ್ನನ್ನು ಗುರುತಿಸಲು ಪ್ರಯತ್ನಿಸುತ್ತಿದ್ದವು ಎನ್ನುತ್ತಿದ್ದರು. ಮಾರಿ ಹಬ್ಬದಲ್ಲಿ ಕೋಣನ ಬಲಿಯ ಪ್ರಸಂಗ ಇವರಿಗೆ ಬಾಲ್ಯದಲ್ಲೇ ಮನಸ್ಸಿನ ಮೇಲೆ ತೀವ್ರತರವಾದ ಪರಿಣಾಮವನ್ನು ಬೀರುತ್ತದೆ. ಕೋಣನ ನೋವು, ಶಕ್ತಿ, ಕನಿಕರ ಸ್ಥಿತಿ ಅವರ ಜೀವನಪರ್ಯಂತ ಕಾಡುತ್ತದೆ, ಮತ್ತು ಜಿಗುಪ್ಸೆ ಹುಟ್ಟಿಸುತ್ತದೆ. ಹಿಂಸೆಗಾಗಿ ಅಮಾಯಕವಾದ ನಿರಪರಾಧಿ ಪಶುಗಳನ್ನು ಕೊಲ್ಲುವುದನ್ನು ಇವರು ಪ್ರತಿಭಟಿಸುತ್ತಾ ಬರುತ್ತಾರೆ. ಯೌವನಕ್ಕೆ ಕಾಲಿಟ್ಟ ನಂತರ ದಾವಣಗೆರೆಯಲ್ಲಿ ಸ್ಥಾಪಿತವಾದ ಒಂದು "ಪ್ರಾಣಿ ದಯಾ ಪ್ರಚಾರಕ ಸಂಘದ" ಉದ್ದೇಶದಂತೆ ಮಾರಿಜಾತ್ರೆ ನಡೆದ ಸ್ಥಳಗಳಿಗೆ ಹೋಗಿ ಪ್ರಾಣಿಗಳನ್ನು ಕೊಲ್ಲದಂತೆ ಪ್ರಚಾರ ಮಾಡುತ್ತಾರೆ. ಬಾಲ್ಯದ ಆ ಘಟನೆ ಅವರಲ್ಲಿ ಅವರ ಜೀವನಮಾನವಿಡೀ ನೆಲೆನಿಂತು ಅವರ ನಿಲುವುಗಳಲ್ಲಿ ಬದಲಾವಣೆಯಾಗಲು ಸಹಕಾರಿಯಾಗುತ್ತದೆ.

ಇವರ ಬಾಲ್ಯ ವಿದ್ಯಾಭ್ಯಾಸದ ಕಾಲದಲ್ಲಿ ಶಾಲೆಯ ಬೇಸರಿಕೆಯನ್ನು ಕಡಿಮೆ ಮಾಡಿದ ಅಂಶವೆಂದರೆ ಇವರ ತಂದೆಯವರು ಮನೆಯಲ್ಲಿ ಸತತವಾಗಿ ಓದುತ್ತಿದ್ದ ರಾಮಾಯಣ ಮತ್ತು ಮಹಾಭಾರತ. ಇದು ಇವರ ಬಾಲ್ಯದ ಮನೆಯ ಬಹುಭಾಗದ ನೆನಪು ಎಂದು ಹೇಳಿಕೊಳ್ಳುತ್ತಾರೆ. ಊರಿನ ಬಹುತೇಕ ಜನ ಇವರ ಪುರಾಣ ಕೇಳಲು ಬರುತ್ತಿದ್ದರು. ವಿದ್ಯಾರ್ಥಿಗಳ ಪೈಕಿ ಹಲವರು ಶಾಲೆಗೆ ಚಕ್ಕರ್ ಹಾಕಿ ಕಥೆ ಕೇಳಲು ಬರುತ್ತಿದ್ದರಂತೆ. ವಿದ್ಯಾರ್ಥಿಗಳಲ್ಲಿಯೇ ಅರ್ಜುನ ಹೆಚ್ಚೋ? ಭೀಮ ಹೆಚ್ಚೋ? ಎಂದು ಚರ್ಚೆಯಾಗುತ್ತಿತ್ತು. ಬಾಲ್ಯದಲ್ಲಿ ನವೀನ ವಿಮರ್ಶಕರನ್ನು ನಾವು ಕಾಣಬಹುದಾಗಿದೆ. ಇವರು ಮನೆಯಲ್ಲಿ ದುಡ್ಡು ಕದ್ದು ಮೇಷ್ಟ್ರಿಗೆ ಬೇಸರಿಕೆಯಾದಾಗಲೆಲ್ಲ ಹಾಕಿಕೊಳ್ಳಲು ಎಲೆ ಅಡಿಕೆ, ಹೊಗೆಸೊಪ್ಪು ತಂದುಕೊಟ್ಟು ಶಾಲೆಗೆ ಚಕ್ಕರ್ ಹಾಕಿ ಪುರಾಣ ಕೇಳಲು ಹೋಗುತ್ತಿದ್ದರಂತೆ. ಅಂದು ಮನರಂಜನೆಗಾಗಿ ಇಂದಿನ ಹಾಗೆ ಟಿ ವಿ ಗಳು ಇಲ್ಲದ ಕಾಲದಲ್ಲಿ ಇದೇ ಅವರ ಮನರಂಜನೆಯ ಮೂಲವಾಗಿತ್ತು. ಅಂದು ಬಾಲ್ಯದಲ್ಲಿ ಕೇಳಿದ ಪುರಾಣಗಳು ಅವರ ವ್ಯಕ್ತಿತ್ವವನ್ನು ಬದಲಾಯಿಸುವಲ್ಲಿ ಸಹಕಾರಿಯಾಗಿದೆ. ಅಂದಿನ ಅವರ ಶಾಲೆಯ ಉಪಾಧ್ಯಾಯರು ವಿದ್ಯಾರ್ಥಿಗಳಿಗೆ ಲಂಗೋಟಿ

ಕಟ್ಟಿರಬೇಕೆಂಬ ನಿಯಮವನ್ನು ಜಾರಿಗೆ ತಂದಿದ್ದರು, ಪ್ರತಿದಿನ ಶಾಲೆ ಪ್ರಾರಂಭವಾದಾಗ ಅವರೇ ಎಲ್ಲರನ್ನು ಹತ್ತಿರಕ್ಕೆ ಕರೆದು ಬೆನ್ನಿನ ಸೊಂಟದ ಕೆಳಗೆ, ಲಂಗೋಟಿ ಕಟ್ಟಿರುವ ಗಂಟು ಇದೆಯೇ ಎಂದು ಕೈಯಿಂದ ಮುಟ್ಟಿ ನೋಡುತ್ತಿದ್ದರು. ಕಟ್ಟಿಲ್ಲದಿದ್ದರೆ ವಿದ್ಯಾರ್ಥಿಯನ್ನು ಕಟ್ಟಿಕೊಂಡು ಬರಲು ಮನೆಗೆ ಕಳುಹಿಸುತ್ತಿದ್ದರು. ಗೊರೂರರು ತಮ್ಮ ತಿಳಿ ಹಾಸ್ಯಮಿಶ್ರಿತ ಶೈಲಿಯಲ್ಲಿ ಅಂದಿನ ಚಿತ್ರಣವನ್ನು ಕಣ್ಣಿಗೆ ಕಟ್ಟುವಂತೆ ಚಿತ್ರಿಸುತ್ತಾರೆ. ಅಂದಿನ ಶಾಲೆಗಳಲ್ಲಿ ಗಡಿಯಾರವಿರದೆ ಮರಳ ಗಡಿಯಾರವನ್ನು ಬಳಸುತ್ತಿದ್ದ ಸನ್ನಿವೇಶ, ಕೂತುಕೊಳ್ಳಲು ಮನೆಯಿಂದ ಚಾಪೆ ಅಥವಾ ಗೋಣಿ ಚೀಲವನ್ನು ತೆಗೆದುಕೊಂಡು ಹೋಗಬೇಕಾದ ಪರಿಸ್ಥಿತಿ ಎಲ್ಲವೂ ಈಗಿನ ಶಿಕ್ಷಣ ಎಷ್ಟು ದೂರ ಮುಂದೆ ಸಾಗಿದೆ ಎಂಬುದನ್ನು ತಿಳಿಸಿಕೊಡುತ್ತದೆ. ಗೊರೂರರು ಲೆಕ್ಕದಲ್ಲಿ ತುಂಬಾ ಹಿಂದೆ ಇದ್ದದ್ದು, ಅವರ ಅಪ್ಪ 120 ಸೇರು ರಾಗಿಯನ್ನು ನಾಲ್ಕು ರೂಪಾಯಿಗೆ ಮಾರಿ ಪಬ್ಲಿಕ್ ಪರೀಕ್ಷೆಯನ್ನು ಕಟ್ಟಿಸುತ್ತಾರೆ. ಅವರು ಹೊಳೆನರಸೀಪುರಕ್ಕೆ ಹೋಗಿ ಪರೀಕ್ಷೆ ಬರೆಯುವುದು. ಗಾಡಿಯಲ್ಲಿ ಹಿಂದಿನ ದಿನ ಹೋಗುವುದು ಎಲ್ಲವೂ ಅಂದಿನ ಕಾಲದ ಶಿಕ್ಷಣ ವ್ಯವಸ್ಥೆಗೆ ಕನ್ನಡಿ ಹಿಡಿದಂತೆ ಚಿತ್ರಿತವಾಗಿದೆ. ಇವರು ತಮ್ಮ ಚರ್ಯಪತ್ರಿಕೆ(ಇಂದಿನ ಮಾರ್ಕ್ಸ್ ಕಾರ್ಡ್)ಗೆ ಅವರ ಅಕ್ಕನ ಸಹಿಯನ್ನು "ಫೋರ್ಜರಿ" ಮಾಡಿ ಸಿಕ್ಕಿಕೊಂಡು ಶಿಕ್ಷೆಗೆ ಗುರಿಯಾಗಿರುತ್ತಾರೆ. ಅಂದರೆ ವಯೋಸಹಜವಾದ ಎಲ್ಲಾ ಕೆಲಸಗಳನ್ನು ಗೊರೂರರು ಮಾಡದೇ ಬಿಟ್ಟಿಲ್ಲ ಎಂದರೆ ತಪ್ಪಾಗಲಾರದು.

ಎಲ್ಲರ ಬಾಲ್ಯದಲ್ಲಿ ಸಾಮಾನ್ಯವಾಗಿ ಬರುವ ಹಾಗೆ ಗೊರೂರರು ಎಳನೀರು ಕದಿಯುವುದು, ತೋಟದ ಮಾಲೀಕನ ಮಗನನ್ನು ಸೇರಿಸಿಕೊಂಡು ಎಳನೀರು ಕದಿಯುವುದು. ಮಾಲೀಕನಿಗೆ ಸಿಕ್ಕಿ ಬೀಳುವುದು, ಮಾವಿನ ಹಣ್ಣು ಕದಿಯುವುದು ಮಾವಿನ ಮರಕ್ಕೆ ಗೆಳೆಯನನ್ನು ಹತ್ತಿಸಿ ಮಾಲೀಕ ಬಂದಾಗ ಇವರು ಓಡುವುದು ಅವನು ಮರದ ಮೇಲಿಂದ ಕೆಳಕ್ಕೆ ಬೀಳುವವನು ನೋಡುವವರೆಗೂ ಇವರಿಗೆ ಇರುವ ನಡುಕ ಎಲ್ಲ ಹುಡುಗರ ವಯೋಸಹಜ ನಡವಳಿಕೆಗಳನ್ನು ನಾವು ಗೊರೂರರ ಬಾಲ್ಯದಲ್ಲಿ ಕಾಣಬಹುದಾಗಿದೆ. ಅಂದಿನ ಕಾಲದಲ್ಲಿ ಮರ ಹತ್ತುವುದೇ ವಿನೋದ, ವ್ಯಾಯಾಮ ಫಲಹಾರ ಎಲ್ಲವೂ ಆಗಿತ್ತು. ರಸ್ತೆ ಮರಗಳಲ್ಲಿ ತೋಪುಗಳ ಮರಗಳಲ್ಲಿ ಮಾವಿನ ಹಣ್ಣು, ನೇರಳೆ ಹಣ್ಣು ತಿನ್ನುತ್ತಿದ್ದರು.

ಇವರ ತಂದೆ ಇವರು ಮನೆಯಲ್ಲಿ ಓದುವುದಿಲ್ಲ ಎಂದು ಉಪಾಧ್ಯಾಯರ ಮನೆಯಲ್ಲಿ ರಾತ್ರಿ ವೇಳೆ ಓದಲು ಕಳುಹಿಸುತ್ತಾರೆ. ಮೇಷ್ಟರ ಮಗನು ಇವರ ತರಗತಿ ಆಗಿರುತ್ತಾನೆ. ಆದರೆ ಇವರಿಗೆ ಸಂಜೆ ಆರು ಗಂಟೆಗೆ ಊಟ ಮಾಡಿ ಹೋದರೆ ಒಂಭತ್ತು ಗಂಟೆ ಹೊತ್ತಿಗೆ ಹಸಿವು ಆಗುತ್ತಿತ್ತು. ಆ ಸಂದರ್ಭದಲ್ಲಿ ಅವರ ಮನೆಯಲ್ಲಿ ಅವಲಕ್ಕಿ ಕದಿಯಲು ಹೋಗಿ ಅಲ್ಲಿ ಚಿನ್ನದ ಬಿಲ್ಲೆ ಸಿಗುತ್ತದೆ. ಆ ಬಿಲ್ಲೆಯನ್ನು ಎಲ್ಲರೂ ಮಲಗಿದ್ದಾಗ ವಾಪಸ್ಸು ಅಲ್ಲಿ ಇಡಲು ಹೋಗಿ ಸಿಕ್ಕಿ ಬಿದ್ದು ಮೇಷ್ಟ್ರಿಂದ ಪೆಟ್ಟು ತಿನ್ನುವ ಸನ್ನಿವೇಶವು ಹಸಿವಿನ ಚಿತ್ರಣವನ್ನು ನಮಗೆ ಚಿತ್ರಿಸುತ್ತದೆ. ಕೆಲವು ಸಂದರ್ಭದಲ್ಲಿ ಅವರ ಅಪ್ಪನಿಂದ ಹಣವನ್ನು ಕದ್ದು ಪೆಟ್ಟು ತಿಂದ ಪ್ರಸಂಗವು ಇದೆ.

ಹಿಂದಿನ ತರಗತಿಯ ಇಂಗ್ಲಿಷ್ ಪುಸ್ತಕವನ್ನು 12 ಪೈಸೆಗೆ ಮಾರಾಟ ಮಾಡಿ ಅದರಲ್ಲಿ ಬಾಳೆಹಣ್ಣು ಸಕ್ರೆ ತಿಂದು ಅವರ ಅಪ್ಪನಿಂದ ಚೆನ್ನಾಗಿ ಒದೆ ತಿಂದು ನಾನು ಯಾರಿಗೂ ಬೇಡದವನು ಆಗಿದ್ದೇನೆ ಎಂದು ತೀರ್ಮಾನಿಸಿ ನನಗೂ ಯಾರ ಹಂಗೂ ಇಲ್ಲ, ಹೊಳೆಗೆ ಬಿದ್ದು ಸಾಯಲು ತೀರ್ಮಾನಿಸಿ ಕೈ ಕಾಲುಗಳಿಗೆ ಆಲದ ಬೀಳಿನಿಂದ ಕುಣಿಸಿಕೊಂಡು ಹೊಳೆಗೆ ಹಾರುತ್ತಾರೆ. ಇದ್ದಕ್ಕಿದ್ದಂತೆ ಸಾವು ಅಂತಿಮವಲ್ಲ ಎಂಬ ತೀರ್ಮಾನಕ್ಕೆ ಬಂದು ಬಲು ಪ್ರಯಾಸದಿಂದ ಬದುಕಿ ಬರುತ್ತಾರೆ. ಒಂದು ರೀತಿಯ ಮರು ಜನ್ಮವೇ ಅವರ ಪಾಲಿಗೆ ಆಗುತ್ತದೆ.

ಇವರು ಪವಾಡ ಮಾಡಬೇಕೆಂದು ಅತಿಮಾನುಷ ಸಿದ್ಧಿಯನ್ನು ಪಡೆಯಬೇಕೆಂದು ಮೂಢನಂಬಿಕೆಯನ್ನು

ಹೊಂದಿ ಬೈರಾಗಿಯಿಂದ ಮೋಸ ಹೋಗುತ್ತಾರೆ. ಇವರು ಕೂಡಿಟ್ಟಿದ್ದ ಎರಡು ರೂಪಾಯಿಯ ಜೊತೆಗೆ ಇವರ ಅಕ್ಕನ ಹತ್ತಿರ ಎರಡು ರೂಪಾಯಿ ಪಡೆದು ಬೈರಾಗಿಗೆ ಕೊಟ್ಟು ಮಂತ್ರವನ್ನು ಹೇಳಿಸಿಕೊಂಡು 48 ದಿನ ಸಂಜೆ ಸಂಧ್ಯಾ ವಂದನೆಯ ಸಂದರ್ಭದಲ್ಲಿ ಪಠಿಸಿ ಸಿದ್ಧಿ ಸಿಗದೆ ಬದುಕಲ್ಲಿ ಒಂದು ಪಾಠವನ್ನು ಕಲಿಯುತ್ತಾರೆ.

ಆಗಿನ ಕಾಲದ ಮಹಾಮಾರಿಯಾದ ಪ್ಲೇಗ್‌ನ ಚಿತ್ರಣವನ್ನು ನಮಗೆ ಕೊಡುತ್ತಾರೆ. ಇವರ ಬಾಲ್ಯದ ದಿನಗಳಲ್ಲಿ ಶಾಲೆಗಳಿಗೆ ಪದೇ ಪದೇ ರಜೆಯನ್ನು ಕೊಡಿಸುತ್ತಿದ್ದ ಒಂದು ಸಂಗತಿ ಎಂದರೆ ಅದು ಪ್ಲೇಗ್ ರೋಗ. ಈ ರೋಗ ಈಗ ಸಂಪೂರ್ಣ ನಾಶವಾಗಿರುವುದರಿಂದ ಅದರ ಪರಿಣಾಮ ನಮಗೆ ಗೊತ್ತಿಲ್ಲ. ಅದರ ಭಯಂಕರ ಕ್ರೌರ್ಯ, ದುಃಖ ನಮಗೆ ಅರ್ಥವಾಗುವುದೇ ಇಲ್ಲ. ಇವರ ಬಾಲ್ಯದಲ್ಲಿ ಪ್ಲೇಗ್ ರೋಗವು ಕೆಲವು ವರುಷ ಪ್ರತಿವರ್ಷವೂ ತಪ್ಪದೇ ಬರುತ್ತಿತ್ತಂತೆ. ಜನ ವರ್ಷಪೂರ್ತ ತಮ್ಮ ಮನೆ ತೊರೆದು ಬಯಲಿನಲ್ಲಿ, ಹೊಲಗಳ ನಡುವೆ, ರಸ್ತೆ ಮರಗಳ ಅಡಿಯಲ್ಲಿ ಗುಡಿಸಲನ್ನು ನಿರ್ಮಿಸಿಕೊಂಡು ವಾಸಿಸಬೇಕಾಗುತ್ತಿತ್ತು. ಗೊರೂರರು ಪ್ಲೇಗ್ ಕಾಲದಲ್ಲಿ ಹೊರಗಡೆ ಬಯಲಿನಲ್ಲಿ ಜೀವಿಸುವುದು ಮಳೆ ಬಿಸಿಲುಗಳ ತೊಂದರೆಯಾಗಿದ್ದರೂ ಸಹ ಶಾಲೆ ಮತ್ತು ಮನೆಯ ಸಂಕುಚಿತ ವಾತಾವರಣಕ್ಕಿಂತ ಹೆಚ್ಚು ಉಲ್ಲಾಸಕರವಾಗಿತ್ತು ಎನ್ನುತ್ತಾರೆ. ಊರಿಗೆ ಪ್ಲೇಗ್ ಬಂದು ಎಲ್ಲರೂ ಊರು ಬಿಟ್ಟು ಹೋಗಿದ್ದರು ಮೂರು ಜನ ಮಾತ್ರ ಊರಲ್ಲೇ ಇದ್ದು ಕಳ್ಳತನ ಮಾಡುತ್ತಿದ್ದದ್ದನ್ನು, ಎಲ್ಲರ ಮನೆಯ ಹಂಡೆಗಳನ್ನು ಮತ್ತು ಮನೆಯಲ್ಲಿ ಇದ್ದ ಇತರ ವಸ್ತುಗಳನ್ನು ಕದಿಯುತ್ತಿದ್ದ ದೃಶ್ಯಗಳನ್ನು ಸಜೀವವಾಗಿ ಚಿತ್ರಿಸುತ್ತಾರೆ. ಪ್ಲೇಗ್ ರೋಗಕ್ಕೆ ಊರಲ್ಲಿ ಬಲಿಯಾದ ಜನರ ವಿವರ ಎಲ್ಲರ ಹೆಣವನ್ನು ಎಲ್ಲಾ ಜಾತಿಯವರು ಎತ್ತುತ್ತಿದ್ದರು. ಒಂದು ಆಶ್ಚರ್ಯವೆಂದರೆ ಆ ದಶಕಗಳಲ್ಲಿ ಪ್ಲೇಗ್ ಹೊಸದಾಗಿ ಬಂದ ರೋಗವಾಗಿ ಅದಕ್ಕೆ ಔಷಧ ಸಹ ಗೊತ್ತಿಲ್ಲದಿದ್ದರೂ ಧೈರ್ಯಶಾಲಿಗಳು ಸಾವಿನ ಭಯವನ್ನೂ ಜಯಿಸಿ ಪ್ಲೇಗು ಬಂದವರಿಗೆ ಉಪಚಾರ ಮಾಡುತ್ತಿದ್ದುದು ಮತ್ತು ಅವರ ಸಂಪರ್ಕ ಹೊಂದಿ ಶವಗಳನ್ನು ಹೊತ್ತು ಸಂಸ್ಕಾರ ಮಾಡುತ್ತಿದ್ದುದು, ದೇಹಕ್ಕಿಂತ ದೊಡ್ಡದಾದದ್ದು ಏನೋ ಇದೆ. ಅದು ನಮ್ಮನ್ನು ಕಾಯುತ್ತಿದೆ ಎಂಬ ಅವರ ದೃಢ ನಂಬಿಕೆ. ದೈವದಲ್ಲಿ ನಂಬಿಕೆ ಮತ್ತು ಮಾನವೀಯತೆ. ಈಚಿನ ದಿನಗಳಲ್ಲಿ ಶವ ಎಂದು ಹೆದರುವವರು ಬಹಳ ಜನ ಇದ್ದಾರೆ. ಈ ಎಲ್ಲಾ ಸನ್ನಿವೇಶಗಳು ಅಂದಿನ ಸಮಾಜದ ಚಿತ್ರಗಳನ್ನು ಮೂಡಿಸುವಲ್ಲಿ ಸಫಲವಾಗಿವೆ.

ಗೊರೂರರು ಗೊರೂರು ಗ್ರಾಮವನ್ನು ಚಿತ್ರಿಸಿದ ಹಾಗೆ ಹಾಸನವನ್ನು ಚಿತ್ರಿಸುತ್ತಾರೆ. ಹಾಸನದಲ್ಲಿ ಪ್ರೌಢಶಾಲೆ ಓದುವಾಗ ಮತ್ತು ಹಾಸ್ಟೆಲ್ ಜೀವನದ ಚಿತ್ರಣವು ಹಾಸನದ ಅಂದಿನ ಸ್ಥಿತಿಗಳು ಮತ್ತು ಹಾಸನದಿಂದ ಗೊರೂರು ಗ್ರಾಮಕ್ಕೆ ಇದ್ದ ರಸ್ತೆಯ ಚಿತ್ರಣ ಬೈಸಿಕಲ್ಲಲ್ಲಿ ಹೋಗುವಾಗ ಬಿದ್ದು ಏಳುವುದು, ಚರ್ಚಾಸ್ಪರ್ಧೆಯಲ್ಲಿ ಗೆಲುವು ಸಾಧಿಸುವುದು, ಶಾಲೆಗೆ ತಡವಾಗಿ ಬಂದು ಅವರ ಉಪಾಧ್ಯಾಯರಿಗೆ ಸಿಗದ ಹಾಗೆ ಓಡಿ ಅವರನ್ನು ಓಡಿಸುವುದು ಹೀಗೆ ಗೊರೂರರ ಬಾಲ್ಯದ, ಶಾಲಾದಿನಗಳ, ಎಲ್ಲ ಅನುಭವಗಳನ್ನು ತಮ್ಮ ಬರವಣಿಗೆಯ ಮೂಲಕ ಜೀವಂತ ಸೆಲೆಯಾಗಿಸಿ ಓದುಗನ ಮನತಟ್ಟುತ್ತದೆ.

**ಪರಾಮರ್ಶನ ಗ್ರಂಥಗಳು**


- ಗೊರೂರು ರಾಮಸ್ವಾಮಿ ಅಯ್ಯಂಗಾರ್. (2006). *ಗೊರೂರು ಅವರ ಬಾಲ್ಯದ ಆತ್ಮಕಥೆ.* ಎಚ್‌ಬಿಎಚ್ ಪಬ್ಲಿಕೇಷನ್.
- ಹಾ.ಮಾ. ನಾಯಕ. (ಸಂ.). (1973). *ಗೊರೂರು ಗೌರವ ಗ್ರಂಥ.* ಗೂರೂರು ಗೆಳೆಯರ ಬಳಗ.